'ಹಳತು ಹೊನ್ನು' ಎನ್ನುವಂತೆ ಒರಳುಕಲ್ಲಿನಲ್ಲಿ ರುಬ್ಬಿ ಮಾಡಿದ ಪದಾರ್ಥಗಳಿಗೆ ಇರುವ ಸ್ವಾದ ಈಗಿನ ಮಿಕ್ಸಿ ಅಥವಾ ಗ್ರೈಂಡರ್‌ನಲ್ಲಿ ರುಬ್ಬಿದ ಪದಾರ್ಥಗಳಿಗೆ ಇರುವುದಿಲ್ಲ. ಒರಳುಕಲ್ಲಿನಲ್ಲಿ ಪದಾರ್ಥಗಳು ಒಂದಕ್ಕೊಂದು ಸೇರಿ ಚೆನ್ನಾಗಿ ನುರಿಯುವುದರೊಂದಿಗೆ ಕೆಲವು ಪದಾರ್ಥಗಳ ಜಿಡ್ಡಿನಂಶವೂ ಚೆನ್ನಾಗಿ ಬೆರೆಯುತ್ತದೆ. ಇದರಲ್ಲಿ ಬಿಸಿಯೂ ಉತ್ಪನ್ನವಾಗುವುದಿಲ್ಲ. ಮಿಕ್ಸರ್‌ನಲ್ಲಿ ಪದಾರ್ಥಗಳು ಬ್ಲೇಡ್‌ನಿಂದ ಕತ್ತರಿಸಲ್ಪಡುತ್ತವೆಯಲ್ಲದೆ ತಾಪವೂ ಸೇರಿಕೊಂಡು ಪದಾರ್ಥಗಳು ಬೇಗನೆ ಹಳಸಿಹೋಗುತ್ತವೆ. ಮಿಕ್ಸರ್‌ಗೆ ವಿದ್ಯುತ್ ಸರಬರಾಜು ಇದ್ದರೆ ಮಾತ್ರ ಅದರ ಉಪಯೋಗ. ಆದರೆ, ಒರಳುಕಲ್ಲಿನಲ್ಲಿ ಯಾವಾಗ ಬೇಕಾದರೂ ರುಬ್ಬಿಕೊಳ್ಳಬಹುದು. ವಿದ್ಯುತ್ ಕಡಿತ, ಶಾಕ್ ಹೊಡೆಯುವುದು, ಸ್ವಲ್ಪ ನೀರು ಜಾಸ್ತಿಯಾದರೆ ಹೊರಗೆಲ್ಲಾ ಚೆಲ್ಲಿ ಅದನ್ನು ಬಳಿಯುವ ಕೆಲಸ, ಬ್ಲೇಡನ್ನು ಆಗಾಗ ಬದಲಾಯಿಸುವುದು... ಕೊನೆಯಲ್ಲಿ ಮಿಕ್ಸರನ್ನೇ ಬದಲಾಯಿಸಿಬಿಡುವುದು... ಇಂತಹ ಜಂಜಾಟಗಳೆಲ್ಲಾ ಒರಳುಕಲ್ಲಿಗೆ ಇಲ್ಲವೇ ಇಲ್ಲ. ಹೆಚ್ಚೆಂದರೆ ಬಹಳ ವರ್ಷಗಳ ಅನಂತರ ಸವೆದು ನುಣುಪಾದಾಗ ಕಲ್ಲುಕುಟಿಗನನ್ನೋ ಕಲ್ಲುವಡ್ಡನನ್ನೋ ಕರೆಸಿ 'ಕಚ್' ಹೊಡೆಸಬಹುದು. ಒರಳುಕಲ್ಲಿನಲ್ಲಿ ರುಬ್ಬುವಾಗ ದೇಹಕ್ಕೆ ವ್ಯಾಯಾಮವೂ ಆಗುತ್ತದೆ. ಜೊತೆಗೆ ಯೋಗ–ಧ್ಯಾನಗಳ ಅನುಸಂಧಾನವೂ ಆಗುತ್ತಿರುತ್ತದೆ. ಮಿಕ್ಸರ್‌ನ ಕರ್ಣಕಠೋರವಾದ ಶಬ್ದದ ನಡುವೆ ಇವೆಲ್ಲಾ ಎಲ್ಲಿ ಸಾಧ್ಯ?

ಭಾರತದ ಇಂದಿನ ಬಹುತೇಕ ಮನೆಗಳಲ್ಲಿ ಗ್ರಾಮೀಣ ಸಂಸ್ಕೃತಿಯ ಕುರುಹಾದ ಒರಳುಕಲ್ಲು ಮಾಯವಾಗಿ, ಆ ಜಾಗವನ್ನು ಯಾಂತ್ರಿಕ ಯುಗದ ಧಾವಂತದ ಬದುಕಿಗೆ ಅನುಕೂಲವಾಗುವಂತಹ ಮಿಕ್ಸರ್/ಗ್ರೈಂಡರ್ ಆಕ್ರಮಿಸಿಕೊಂಡಿದೆ. ಇದರಿಂದ ಒರಳುಕಲ್ಲು ತಯಾರಿಸುವ ಕಲ್ಲುವಡ್ಡರ ಕೆಲಸಕ್ಕೂ ಕಲ್ಲು ಬಿದ್ದಿದೆ. ಅನಿವಾರ್ಯವಾಗಿ ಅವರು ಬೇರೆ ಉದ್ಯೋಗಗಳತ್ತ ಹೊರಳುತ್ತಿದ್ದಾರೆ. ಆಧುನಿಕ ಕಾಲದ ಮಕ್ಕಳಿಗೆ ಒರಳುಕಲ್ಲು ಒಂದು ವಿಶಿಷ್ಟ ವಸ್ತುವಾಗಿ ಕಾಣಬಹುದು. ಮುಂಬರುವ ಮಕ್ಕಳಿಗೆ ವಸ್ತುಸಂಗ್ರಹಾಲಯದಲ್ಲಿರುವ ಹಲವಾರು ಪ್ರಾಚೀನ ವಸ್ತುಗಳೊಡನೆ ಒರಳುಕಲ್ಲನ್ನೂ ತೋರಿಸಿ ಅದನ್ನು ನಮ್ಮ ಹಿರಿಯರು ಹೇಗೆ ಬಳಸುತ್ತಿದ್ದರು ಎಂದು ವಿವರಿಸುವಾಗ ಅವರಿಗೆ ಒರಳುಕಲ್ಲು ಒಂದು ಅಚ್ಚರಿಯೆಂಬಂತೆ ತೋರುವುದು ವಾಸ್ತವ ಸತ್ಯ.


**ಅರುಣಾ ಕೆ.ಆರ್.**

ಶೃಂಗೇರಿಯವರು. ಬಿಎಸ್.ಸಿ. ಬಳಿಕ ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದಿಂದ ಕನ್ನಡ ಎಂ.ಎ., ಜೈನ್ ವಿಶ್ವವಿದ್ಯಾಲಯದಿಂದ ಎಂ.ಫಿಲ್. ಪದವಿ ಪಡೆದಿದ್ದಾರೆ. ಕನ್ನಡ ಮತ್ತು ಅಪಭ್ರಂಶ ಭಾಷೆಗಳಲ್ಲಿ ಹತ್ತನೇ ಶತಮಾನದ ಜೈನ ಕಾವ್ಯಗಳ ಬಗ್ಗೆ ತೌಲನಿಕ ಸಂಶೋಧನಾ ಅಧ್ಯಯನ ಮಾಡಿ ಜೈನ್ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿಯನ್ನು ಪಡೆದಿದ್ದಾರೆ. ಪುಣೆಯ ಜೈನ್ ಮ್ಯೂಸಿಯಂ ಯೋಜನೆ, ಧರ್ಮಸ್ಥಳದ ಮಂಜೂಷಾ ಮ್ಯೂಸಿಯಂ ಕುರಿತು ಪುಸ್ತಕ ಯೋಜನೆಗಳಲ್ಲಿ ಸಹಾಯಕಿಯಾಗಿ ಕಾರ್ಯ ನಿರ್ವಹಿಸಿದ್ದಾರೆ. ಶಾಂತಿನಾಥ ಕವಿಯ 'ಸುಕುಮಾರ ಚರಿತೆ'ಯನ್ನು ಸಂಕ್ಷಿಪ್ತವಾಗಿ ಸಂಗ್ರಹಿಸಿ ಪ್ರಕಟಿಸಿದ್ದಾರೆ. 'ನನ್ನೊಳಗಿನ ಮಲೆನಾಡು' ಎಂಬ ಪುಸ್ತಕವನ್ನು ಸಂಪಾದಿಸಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.